ಕಾಣುತ್ತಿಲ್ಲ... ಒಂದು ನೆಗೆಟಿವ್ ಕ್ಯಾರೆಕ್ಟರ್‌ನಂತೆ ಕಾಣ್ತಿದ್ದಾನೆ'. ನಂತರ ಎಲ್ಲರಿಗೂ ತಮ್ಮ ಮೊಬೈಲ್ ತೋರಿಸುತ್ತಾ ಹೇಳಿದರು, 'ನಾನು ಹೀಗೆ ಕಾಣ್ತಿದ್ದೇನೆ ಅಂತ ನ್ಯಾನ್ಸಿ ಹೇಳುತ್ತಿದ್ದಾಳೆ' ಎಲ್ಲರೂ ನಕ್ಕರು.

'ನಾನು ನಿನಗೆ ಇಷ್ಟು ಕೆಟ್ಟದ್ದಾಗಿ ಕಾಣಿಸುತ್ತೇನೆಯೇ?' ಅವರು ಮುಗ್ಧತೆಯಿಂದ ಕೇಳಿದರು.

'ಇಲ್ಲ ಇಲ್ಲ... ಫಿಲಿಪ್. ನಾನು ನಿಮ್ಮನ್ನು ನಟ ಗೂಫಿ ಪೇಂಟಲ್‌ರೊಂದಿಗೆ ಹೋಲಿಸುತ್ತಿದ್ದೇನೆ. ಅವರು ಶಕುನಿಯ ಪಾತ್ರವನ್ನು ಮಾಡಿದ್ದರು... ಅವರು ಒಬ್ಬ ಪ್ರಸಿದ್ಧ ಕಲಾಕಾರರು'.

ಅತಿ ಹೆಚ್ಚು ಉಡುಗೊರೆಗಳನ್ನು ಫಿಲಿಪ್ ಅವರೇ ಪಡೆದಿದ್ದರು. ನನಗೆ ಒಂದು ಉಡುಗೊರೆ ಮಾತ್ರ ಸಿಕ್ಕಿತು. ಉಡುಗೊರೆಯನ್ನು ಬಿಚ್ಚುವ ಸರದಿ ಬಂದಾಗ, ನಾನು ಗೆದ್ದ ಉಡುಗೊರೆ ಫಿಲಿಪ್ ಅವರು ಖರೀದಿಸಿದ್ದು ಎಂಬುದು ತಿಳಿಯಿತು. ಅದೊಂದು ಅಗ್ಗದ, ಹತ್ತು ಇಪ್ಪತ್ತು ಕ್ರೋನರ್‌ಗಿಂತ ಹೆಚ್ಚು ಬೆಲೆಯುಳ್ಳದ್ದು ಎಂದು ಅನ್ನಿಸುತ್ತಿರಲಿಲ್ಲ; ಅದು ಸುಮಾರು ಹತ್ತು ಕ್ರೋನರಿನ ಟೈಗರನ್ನು ಶಾಪ್‌ನಿಂದ ಖರೀದಿಸಿದಂತಿತ್ತು. ನಾನು ಎಪ್ಪತ್ತು ಎಂಬತ್ತು ಕ್ರೋನರ್‌ನ ಮೂರು ಉಡುಗೊರೆಗಳನ್ನು ಸುಂದರವಾಗಿ ಪ್ಯಾಕ್ ಮಾಡಿಸಿಕೊಂಡು ತಂದಿದ್ದೆ. ಆದರೆ ನನಗೆ ಲಭಿಸಿದ್ದು ತುಂಬಾ ಸಾಮಾನ್ಯ ಉಡುಗೊರೆ... ನಾನು ಫಿಲಿಪ್‌ಗೆ ಕೇಳಿದೆ, 'ಫಿಲಿಪ್ ಇದು ಐವತ್ತು ಕ್ರೋನರ್‌ನ ಉಡುಗೊರೆಯೇ?'

ಅವರು ನಾಚಿದರು. ತಮ್ಮದೊಂದು ಉಡುಗೊರೆಯನ್ನು ನನ್ನೆಡೆಗೆ ಚಾಚುತ್ತಾ ಹೇಳಿದರು, 'ಇದನ್ನು ಇಟ್ಟುಕೋ'.

'ಬೇಡ ಬೇಡ, ನೀವು ಗೆದ್ದ ಉಡುಗೊರೆಯನ್ನು ನಾನಿಟ್ಟುಕೊಳ್ಳಲ್ಲ'.

ಫಿಲಿಪ್ ಹಟ ಮಾಡಿದಾಗ ಲಾರಾ ಹೇಳಿದರು, 'ಆಟವನ್ನು ಆಟದ ಸ್ಪಿರಿಟ್‌ನಲ್ಲೇ ತೆಗೆದುಕೊಳ್ಳಬೇಕು, ಗೆದ್ದ ಉಡುಗೊರೆ ಗೆದ್ದವರಿಗೇ ಸೇರಬೇಕು...'

ಫಿಲಿಪ್ ನನಗೆ ಹೇಳಿದರು, 'ನನಗೆ ನಿನ್ನ ಉಡುಗೊರೆ ಸಾಲದಲ್ಲಿ ಉಳಿಯಿತು'.

'ಇಲ್ಲ ಫಿಲಿಪ್, ನಾನು ಸುಮ್ನೆ ತಮಾಷೆ ಮಾಡ್ತಿದ್ದೆ'.

ಅಟ್ಟಹಾಸ, ಕೇಕೆ, ಚಪ್ಪಾಳೆ, ಹರಟೆ, ತಮಾಷೆ–ಗೇಲಿ ಇವುಗಳ ನಡುವೆ ಫಿಲಿಪ್ ಮತ್ತು ನನ್ನ ನಡುವೆ ಅಂದು ಸಂಜೆ ಆತ್ಮೀಯತೆ ಬೆಳೆಯಿತು. ಅವರು ನನಗೊಬ್ಬ ಒಳ್ಳೆಯ ಮಿತ್ರರಾದರು.

ಒಟ್ಟಿನಲ್ಲಿ ಕ್ರಿಸ್‌ಮಸ್ ಸಮಾರಂಭ ಚೆನ್ನಾಗಿ ನೆರವೇರಿತು. ಫಿಲಿಪ್ ಸಂತಸದಿಂದ ಪದೇ ಪದೇ 'ಹ್ಯುಗಲಿಗ್ತ್!' ಎಂದು ಹೇಳುತ್ತಿದ್ದರು. ನಾನೂ ಅವರೊಂದಿಗೆ 'ಹ್ಯುಗೆ!' ಎಂದು ಧ್ವನಿಗೂಡಿಸಿದೆ. ನನಗೆ ಡ್ಯಾನಿಶ್ ಸಂಸ್ಕೃತಿಯಲ್ಲಿ ಪ್ರಯೋಗಿಸುವ ಎರಡು ಟಿಪಿಕಲ್ ಶಬ್ದ ಹ್ಯುಗಲಿಗ್ತ್ (**Hugaligth**) ಮತ್ತು (**hyuge**) ತುಂಬಾ ಇಷ್ಟವಾಗುತ್ತಿದ್ದವು. ಇವುಗಳ ಅರ್ಥ, 'ವಿಶ್ರಾಂತಿದಾಯಕ, ಮೋಹಕ ಮತ್ತು ಆಹ್ಲಾದಕರ ಕ್ಷಣ'.

ಲಾರ್ಸ್‌ನ ತಂದೆ ತಾಯಿಯ ಕಡೆಯಿಂದ ನನಗೆ ವೈಯಕ್ತಿಕವಾಗಿ ಉಡುಗೊರೆಗಳು ಸಿಕ್ಕವು. ನಾನೂ ಅವರಿಗೆ ಉಡುಗೊರೆಯನ್ನು ಕೊಟ್ಟೆ. ಲಾರ್ಸ್ ನನಗೆ ವಜ್ರದ ಟಾಪ್ಸ್ ಉಡುಗೊರೆ ಕೊಟ್ಟ. ನಾನು ಅದನ್ನು ಎಲ್ಲರೆದುರು ನನ್ನ ಬಾಹುಗಳಿಗೆ ಹಾಕಿಕೊಂಡು ಚುಂಬಿಸಿದೆ. ಎಲ್ಲರೂ ಚಪ್ಪಾಳೆ ತಟ್ಟಿದರು.

ಜೋಶುಆ ಸಹ ಮನಸಾರೆ ಸಂತಸಗೊಂಡ. ಅವನು ಅತ್ಯಂತ ಚಿಕ್ಕವನಾಗಿದ್ದು, ಎಲ್ಲರೂ ಅವನಿಗೆ ತಮ್ಮ ತಮ್ಮ ಉಡುಗೊರೆಗಳನ್ನು ಕೊಟ್ಟರು. ಅವರ ಉಡುಗೊರೆಗಳಿಂದ ಒಂದು ಬ್ಯಾಗ್ ತುಂಬಿತು. ನನ್ನ ಕಣ್ಣುಗಳು ಸಂತಸದಿಂದ ತುಂಬಿ ಬಂದವು. ನನ್ನ ಮಗನಿಗೆ ಲಾರ್ಸ್‌ನ ಪರಿವಾರದಲ್ಲಿ ಪೂರ್ಣ ಒಪ್ಪಿಗೆ ಲಭಿಸಿದ್ದು, ಎಲ್ಲರೂ ಅವನನ್ನು ಸ್ನೇಹದಿಂದ ತಮ್ಮವನೆಂದು ನೋಡುತ್ತಾ ಪ್ರೀತಿಸುವುದನ್ನು ನೋಡಿ ತುಂಬಾ ಹಿತವೆನಿಸಿತು. ನಾನು ಮನಸ್ಸಿನಲ್ಲಿ, ಹೇ ದೇವರೇ, ಈ ಸಂತೋಷ ಹೀಗೆಯೇ ಇರಲಿ, ನಾವು ಹೀಗೆಯೇ ಸುಂದರ ಸಮಾರಂಭವನ್ನು ಮಾಡುತ್ತಿರಲಿ ಎಂದು ಹೇಳಿಕೊಳ್ಳುತ್ತಿದ್ದೆ.

ಮನೆಗೆ ಮರಳಿ ಹೋಗುವುದಕ್ಕೆ ಮೊದಲು ಎಲ್ಲರೂ ಲಾರಾಗೆ ಸೋಂಡರಬರ್ಗ್ ಪ್ರಯಾಣಕ್ಕೆ ಶುಭವನ್ನು ಕೋರಿದರು. ಡೇನಿಯಲ್ ಲಾರಾರನ್ನು ಏರ್‌ಪೋರ್ಟ್‌ಗೆ ಬಿಡುವುದಾಗಿ ಹೇಳಿದರು, ಇದಕ್ಕೆ ಲಾರಾ ಸಂತಸದಿಂದ ಒಪ್ಪಿದರು. ಅವರು ಜೊತೆಯಲ್ಲಿ ಇರದಿದ್ದಾಗ್ಯೂ, ಒಬ್ಬರಿಗೊಬ್ಬರು ಸಣ್ಣ ಪುಟ್ಟ ಕೆಲಸಗಳಲ್ಲಿ ಸಹಾಯವನ್ನು ಮಾಡಿಕೊಳ್ಳುತ್ತಿದ್ದರು. ಡೇನಿಯಲ್ ನನಗೆ ಥಿಯೇಟರ್‌ಗೆ ಹೋಗಲು ಟಿಕೆಟ್ ತಂದು ಕೊಡುತ್ತಾರೆ, ನಾನು ಅವರಿಗೆ ಅಡುಗೆ ಮಾಡುತ್ತೇನೆ, ನಾವು ಆಗಾಗ ಭೇಟಿಯಾಗುತ್ತೇವೆ, ಇಲ್ಲದಿದ್ದಲ್ಲಿ ತಗಾದೆ ಆರಂಭವಾಗುತ್ತದೆ... ಶಾರ್ಟ್ ಎಂಡ್ ಸ್ವೀಟ್... ಎಂದು ಲಾರಾ ನನಗೆ ಹೇಳಿದ್ದರು.

***

ಲಾರಾ ತಮ್ಮ ಮನೆಯನ್ನು ಲೀಸ್‌ಗೆ ಕೊಟ್ಟು ತಮ್ಮ ತಾಯಿಯ ಬಳಿಗೆ, ತಮ್ಮ ಅಬ್ಬಿಯೊಂದಿಗೆ ಹೋದರು. ಆದರೂ ನಾವು ಫೋನ್ ಮತ್ತು ಇಮೇಲ್ ಮೂಲಕ ಸಂಪರ್ಕವಿಟ್ಟುಕೊಂಡಿದ್ದೆವು. ಆದರೆ ನಾನು ಅವರೊಂದಿಗಿನ ನನ್ನ ವಾರದ ಭೇಟಿಯನ್ನು ಮಿಸ್ ಮಾಡಿಕೊಂಡೆ.

ನಂತರ ನಾನೂ ಸಹ ಜಟ್‌ಲೆಂಡ್, ಸೋಂಡರಬರ್ಗ್‌ಗೆ ಹೋಗಿ ಅವರ ತಾಯಿ ಗ್ರೇಥಾರನ್ನು ಭೇಟಿಯಾಗಿ, ಡೆನ್ಮಾರ್ಕ್‌ನ ಇನ್ನೊಂದು ನಗರಕ್ಕೂ ಹೋಗಿ ಅಡ್ಡಾಡಿಕೊಂಡು ಬರಲು ಯೋಚಿಸಿದೆ. ಲಾರ್ಸ್ ಮತ್ತು ಜೋಶುಆಗೆ ನನ್ನೊಂದಿಗೆ ಬರಲು ಹೇಳಿದಾಗ ಅವರು ಖುಷಿಯಿಂದ ಒಪ್ಪಿದರು.

ಕೋಪನಹೇಗನ್‌ನಿಂದ ದಕ್ಷಿಣ ಡೆನ್ಮಾರ್ಕ್‌ನಲ್ಲಿ, ಜರ್ಮನಿಯ ಬಾರ್ಡರ್ ಸಮೀಪದಲ್ಲಿದ್ದ ನಗರ ಸೋಂಡರಬರ್ಗ್‌ನ ರೈಲು ಪ್ರಯಾಣ ನನಗೆ ತುಂಬಾ ಇಷ್ಟವಾಯಿತು. ಅದು ಹಸುರು ಮತ್ತು ಪ್ರಾಕೃತಿಕ ಸೌಂದರ್ಯದಿಂದ ಕಂಗೊಳಿಸುತ್ತಿತ್ತು. ಅಲ್ಲಿಗೆ ಹೋಗಲು ಸುಮಾರು ನಾಲ್ಕು ಗಂಟೆಗಳ ಪ್ರಯಾಣ ಮಾಡಬೇಕಾಯಿತು. ರೈಲಿನಿಂದ ಇಳಿದಾಗ ಎದುರಿಗೆ ಸಮುದ್ರದ ಕೊಲ್ಲಿ ಮತ್ತು ಬಂದರು ಕಂಡಿತು. ಸಮುದ್ರದಲ್ಲಿ ಬಹಳಷ್ಟು ಹಡಗುಗಳು ಸಂಚರಿಸುತ್ತಿದ್ದವು. ಜರ್ಮನಿಯ ಶ್ರೀಮಂತರು ತಮ್ಮ ಸಮುದ್ರದ ನೌಕೆಗಳಲ್ಲಿ ಸೋಂಡರ್‌ಬರ್ಗ್‌ಗೆ ಬರುತ್ತಿರುತ್ತಾರೆ ಎಂದು ಲಾರ್ಸ್ ನನಗೆ ಹೇಳಿದ.

ರೈಲ್ವೆ ಸ್ಟೇಷನ್‌ನಿಂದ ಮನೆಯವರೆಗಿನ ಹದಿನೈದು ನಿಮಿಷಗಳ ಮಾರ್ಗವನ್ನು ಕಾಲ್ನಡಿಗೆಯಲ್ಲಿಯೇ ಮಾಡಿ ಮನೆಗೆ ಹೋದೆವು. ಸೋಂಡರ್‌ಬರ್ಗ್ ಒಂದು ಸುಂದರ ಚಿತ್ರದಂತೆ ಕಂಡಿತು. ಅದರ ಕಣ ಕಣದಲ್ಲೂ ಸೌಂದರ್ಯವಿತ್ತು! ಒಂದು ವಿಶಾಲ ಮನೆಯಲ್ಲಿ ಅಜ್ಜಿ ಗ್ರೇಥಾ ಒಂಟಿಯಾಗಿ ವಾಸಿಸುತ್ತಿದ್ದರು. ಅವರ ಪತಿ ಈ ಹಿಂದೆಯೇ ಇಹಲೋಕವನ್ನು ತ್ಯಜಿಸಿದ್ದರು. ಅವರ ಇಬ್ಬರು ಮಕ್ಕಳಾದ ಫಿಲಿಪ್ ಮತ್ತು ಲಾರಾ ಕೋಪನ್‌ಹೇಗನ್‌ಗೆ ಹೋಗಿ ನೆಲೆಸಿದ್ದರು. ಮನೆಯ ಕೆಲಸಗಳಿಗೆ ಸರ್ಕಾರದಿಂದ ಲಭಿಸುತ್ತಿದ್ದ ಸಹಾಯ ಸಾಕಾಗುತ್ತಿರಲಿಲ್ಲ. ಹೀಗಾಗಿ ಲಾರಾ ಆಗಾಗ ಕೋಪನ್‌ಹೇಗನ್‌ನಿಂದ ತಮ್ಮ ತಾಯಿಯ ಬಳಿಗೆ ಬಂದು, ಅವರಿಗೆ ಸಹಾಯವನ್ನು ಮಾಡುತ್ತಿದ್ದರು. ಅವರ ಬಿಲ್‌ಗಳ ಹಣವನ್ನು ಕಟ್ಟುತ್ತಿದ್ದರು, ಮನೆಯನ್ನು ಸ್ವಚ್ಛಗೊಳಿಸುತ್ತಿದ್ದರು. ಅವರಿಗೆ ಬೇಕಾದ ವಸ್ತುಗಳನ್ನು ಖರೀದಿಸಿ ಕೊಡುತ್ತಿದ್ದರು. ಅಡುಗೆಯನ್ನು ಮಾಡಿ ಫ್ರಿಜ್‌ನಲ್ಲಿ ಸ್ಟೋರ್ ಮಾಡುತ್ತಿದ್ದರು.

ನಾನು ಮನೆಯನ್ನು ನೋಡಿ ನೆಮ್ಮದಿಯನ್ನು ಮನಗಂಡೆ. ಲಾರ್ಸ್‌ನ ಮನೆಯವರು ನಗರದಲ್ಲಿ ಚಿಕ್ಕ ಚಿಕ್ಕ ಮನೆಗಳಲ್ಲಿ ವಾಸಿಸುತ್ತಿದ್ದರು, ಆದರೆ ಅಜ್ಜಿ ಒಂದು ವಿಶಾಲ ಮತ್ತು ಸ್ವತಂತ್ರ ಮನೆಯಲ್ಲಿ ವಾಸಿಸುತ್ತಿದ್ದರು. ವಿಶಾಲ ತೆರೆದ ಲಾನ್... ಗೇಟಿನಿಂದ ವರಾಂಡದವರೆಗೆ ಒಂದು ಸುಂದರ ಮಾರ್ಗವಿತ್ತು. ಗಾರ್ಡನ್‌ನಲ್ಲಿ ಕೆಂಪು ಮತ್ತು ಬಿಳಿಯ ಧ್ವಜ ಹಾರಾಡುತ್ತಿತ್ತು. ಈಗಿರುವ ಎಲ್ಲಾ ರಾಷ್ಟ್ರೀಯ ಧ್ವಜಗಳಲ್ಲಿ ಡೆನ್ಮಾರ್ಕ್‌ನ ರಾಷ್ಟ್ರೀಯ ಧ್ವಜ ಜಗತ್ತಿನ ಅತ್ಯಂತ ಪುರಾತನ ಧ್ವಜವೆಂದು ಹೇಳಲಾಗುತ್ತದೆ.

ನಮ್ಮನ್ನು ನೋಡಿ ಅಜ್ಜಿಗೆ ತುಂಬಾ ಸಂತೋಷವಾಯಿತು. ಲಾರ್ಸ್ ತನ್ನ ಅಜ್ಜಿಯನ್ನು 'ಮುಆಮುಆ' (ಅಮ್ಮ) ಎಂದು ಕರೆಯುತ್ತಿದ್ದ. ನಾನು ಅವರನ್ನು 'ಮುಆಮುಆ' ಎಂದು ಕರೆದಾಗ ಅವರು ನನಗೆ, 'ನೀನು ನನ್ನನ್ನು ಗ್ರೇಥಾ ಎಂದು ಕರೆಯಬಹುದು' ಎಂದರು.

ನಾನು ಅವರನ್ನು ಗಮನಿಸಿದೆ: ಸುಕ್ಕಾದ ಬೊಚ್ಚು ಬಾಯಿ, ತಲೆಯಲ್ಲಿದ್ದ ಬಿಳಿ ಕೂದಲುಗಳು ಬಹುತೇಕ ಉದುರಿದ್ದವು. ಬಾಗಿದ ಶರೀರ, ಒಳಗೆ ಹೋದ ಕಣ್ಣುಗಳು. ಕೈಯಲ್ಲಿ ಹಿಡಿದ ಊರುಗೋಲಿನಿಂದಾಗಿ ಕಂಪಿಸುವ ಹೆಜ್ಜೆಗಳನ್ನು ಸಂಭಾಳಿಸಲು ಪ್ರಯತ್ನಿಸುತ್ತಾ...

'ಬೇಡ' ನನ್ನ ಬಾಯಿಯಿಂದ ಹೊರಟಿತು, 'ನಾನು ನಿಮ್ಮ ಹೆಸರನ್ನು ಹೇಳಲಾರೆ. ನೀವು ನನಗಿಂತ ತುಂಬಾ ದೊಡ್ಡವರು'.

'ನಿನ್ನ ಅನುಕೂಲದಂತೆ...' ಗ್ರೇಥಾ ಬೇರೇನೂ ಹೇಳಲು ಸಾಧ್ಯವಿರಲಿಲ್ಲ. ಅವರು ನನ್ನ ಅನುಕೂಲಕ್ಕಾಗಿ ಹೇಳುತ್ತಿದ್ದರು. ಇಲ್ಲಿ ಎಲ್ಲರನ್ನೂ